

ಅನ್ನುವ ಬೇಜಾರು ಅವರಿಗೂ ಇರುತ್ತಲ್ಲ. ನೀವ್ಯಾಕೆ ಅಪ್ಪ ಅಮ್ಮನನ್ನು ಅರ್ಥ ಮಾಡಿಕೊಳ್ಳುವುದೇ ಇಲ್ಲ'' ಅವಳು ಉಸಿರನ್ನೇ ಪಳಗಿಸಿ, ಅಕ್ಷರವಾಗಿಸಿ, ಶಬ್ದ ಪೋಣಿಸಿ ಮಾತನಾಡುತ್ತಿದ್ದಳು. ಹೆಂಡತಿ, ಅವಳ ಅತ್ತೆ ಮಾವನ ಪರ ವಹಿಸಿ ಮಾತನಾಡಿದ್ದು ಶೇಖರನಿಗೆ ಇಷ್ಟ ಆಗಲಿಲ್ಲ ಅಂತ ಆತನ ಮುಖಭಾವವೇ ಹೇಳುತ್ತಿತ್ತು. ಒಬ್ಬನೇ ಮಗ ಅಂತ ತಲೆಮೇಲೆ ಇಟ್ಟು ಬೆಳೆಸಿದ್ದರು. ಯಾವುದಕ್ಕೂ ಇಲ್ಲ ಎಂದು ಅಂದವರಲ್ಲ. ಹಾಗಾಗಿಯೇ, ಅಪ್ಪ ಅಮ್ಮನಿಗಿಂತ ತಾನೇ ಹೆಚ್ಚು ತಿಳಿದವನಂತೆ ವರ್ತಿಸುತ್ತಿದ್ದ. ಆದರೆ, ರುಕ್ಮಿಣಿ ಎಲ್ಲವನ್ನೂ ಸರಿತೂಗಿಸಿಕೊಂಡು ಹೋಗುತ್ತಿದ್ದಳು.